# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ
# ಉತ್ತರ ಕನ್ನಡ : ಕಾರವಾರ

**ಸ್ಪೇಷಲ್ ಕೇಸ್ ನಂ. 142/2022**

**ದೋ.ಸಾ. : 04 ಫ್ರಾ.ಸಾ. : 03**

ಸಾಕ್ಷಿಯ ಹೆಸರು : ರಾಮಚಂದ್ರ ಅಮೃತ ಮಿರಾಶಿ
ಗಂಡನ ಹೆಸರು : ಅಮೃತ ಮಿರಾಶಿ
ವಯಸ್ಸು : 62 ವರ್ಷ
ಕೆಲಸ : ರೈತಾಪಿ
ವಾಸ : ಗಾಂಧಿನಗರ, ದಾಂಡೇಲಿ

**ದಿನಾಂಕಃ 27-11-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ದಿಃ 27-08-2022 ರಂದು ದಾಂಡೇಲಿ ಪೊಲೀಸರು ನೇಚರ್ ನೆಸ್ಟ್ ಹೋಂ ಸ್ಟೇ ಯಲ್ಲಿ ಒಬ್ಬ ಹೆಂಗಸಿನ ಕೊಲೆಯಾಗಿದೆ ಎಂದು ಪಂಚನಾಮೆ ಮಾಡಲು ಪಂಚನಾಗಿ ಬರುವಂತೆ ನನಗೆ ನೋಟಿಸ್ ನೀಡಿದ್ದರು. ಅದರಂತೆ ನಾನು ನೇಚರ್ ನೆಸ್ಟ್ ಹೋಂ ಸ್ಟೇ ಗೆ ಹೋಗಿದ್ದು, ಅಲ್ಲಿ ಚಾಸಾ-9 ರವರು ಹಾಜರಿದ್ದು, ಸದರಿ ಮಹಿಳೆ ಉಳಿದುಕೊಳ್ಳುತ್ತಿದ್ದ ಹಾಗೂ ಆಕೆಯ ಕೊಲೆಯಾದ ಕೊಠಡಿಯನ್ನು ತೋರಿಸಿದ್ದು, ಅಲ್ಲಿ ಪೊಲೀಸರು ನಮ್ಮ ಸಮಕ್ಷಮ ಪಂಚನಾಮೆ ಮಾಡಿ, ನಕಾಶೆಯನ್ನು ತಯಾರಿಸಿ, ಫೋಟೋವನ್ನು ತೆಗೆದು, ಪಂಚನಾಮೆ ಹಾಗೂ ನಕಾಶೆಗೆ ನನ್ನ ಸಹಿಯನ್ನು ಪಡೆದುಕೊಂಡರು. ಪಂಚನಾಮೆ ಮಾಡಿದ ಕೊಠಡಿಯಲ್ಲಿ ಬಟ್ಟೆಗಳು ಹರಡಿದ್ದವು, ಸದರಿ ಕೊಠಡಿಗೆ ಬೆಳಕಿನ ವ್ಯವಸ್ಥೆ ಇತ್ತು. ಪಂಚನಾಮೆ ಹಾಗೂ ನಕಾಶೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಪಂಚನಾಮೆಯನ್ನು ನಿಪಿ-8 ಎಂದು, ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು, ನಕಾಶೆಯನ್ನು ನಿಪಿ-9 ಎಂದು, ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು, ಫೋಟೋಗಳನ್ನು ನಿಪಿ-10 ಮತ್ತು 11 ಎಂದು, ನೋಟಿಸ್ ನ್ನು ನಿಪಿ-12 ಎಂದು, ಸಾಕ್ಷಿಯ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು.

2. ಅದೇ ದಿನ ಪೊಲೀಸ್ ಠಾಣೆಗೆ ಪಂಚನಾಮೆಗೆ ಬರುವಂತೆ ನೋಟಿಸ್ ನೀಡಿದ್ದರು. ಅದರಂತೆ ನಾನು ದಾಂಡೇಲಿ ಗ್ರಾಮೀಣ ಪೊಲೀಸ್ ಠಾಣೆಗೆ ಹೋಗಿದ್ದು, ಅಲ್ಲಿ ಆರೋಪಿತರಿಬ್ಬರೂ ಇದ್ದರು ಹಾಗೂ ಪೊಲೀಸ್ ಠಾಣೆ ಮುಂದೆ ಒಂದು ಪೋಟೋವನ್ನು ತೆಗೆದರು. ಆ ನಂತರ ನಾನು ಮನೆಗೆ ಬಂದಿರುತ್ತೇನೆ. ಪೊಲೀಸ್ ಠಾಣೆ ಮುಂದೆ ತೆಗೆದ ಪೋಟೋವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ-13 ಎಂದು ಗುರುತಿಸಲಾಯಿತು. ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-14 ಎಂದು, ಸಾಕ್ಷಿಯ ಸಹಿಯನ್ನು ನಿಪಿ-14(ಎ) ಎಂದು, ನೋಟಿಸ್‌ನ್ನು ನಿಪಿ-15 ಎಂದು, ಸಾಕ್ಷಿಯ ಸಹಿಯನ್ನು ನಿಪಿ-15(ಎ) ಎಂದು ಗುರುತಿಸಲಾಯಿತು. ನಿಪಿ-14 ರ ಪಂಚನಾಮೆಯ ಕಾಲಕ್ಕೆ ತೆಗೆದ 3 ಪೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-16 ರಿಂದ ನಿಪಿ-18 ಎಂದು ಗುರುತಿಸಲಾಯಿತು. ನಿಪಿ-16 ರಲ್ಲಿ 1 ಆರೋಪಿಯು ಮೃತೆ ಸುಶೀಲಾಳು ವಾಸವಾಗಿದ್ದ ಕೊಠಡಿಯನ್ನು ತೋರಿಸುತ್ತಿರುತ್ತಾನೆ, ನಿಪಿ-17 ರಲ್ಲಿ ಬಳೆ ಚೂರುಗಳನ್ನು ನೀಡುತ್ತಿರುವುದು, ನಿಪಿ-18 ರಲ್ಲಿ 1 ನೇ ಆರೋಪಿ ಸೀರೆಯನ್ನು ತೋರಿಸಿ, ಮೃತಳಿಗೆ ಇದೇ ಬಟ್ಟೆಯಿಂದ ಕತ್ತು ಬಿಗಿದಿರುತ್ತೇನೆ ಎಂದು ಹೇಳಿರುವುದನ್ನು ನುಡಿಯುತ್ತಾರೆ.

**(ಈ ಹಂತದಲ್ಲಿ ಮಾನ್ಯ ಪಿ.ಪಿ. ರವರು ನಾಲ್ಕು ಸೀಲಾದ ವಸ್ತುಗಳನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲು ಅನುಮತಿ ಕೋರಿದ್ದರು, ಸದ್ರಿ ವಸ್ತುಗಳ ಮೇಲೆ ಇದ್ದ ಸೀಲು ಸುಸ್ಥಿತಿಯಲ್ಲಿ ಇರುವುದರಿಂದ ಮಾನ್ಯ ಪಿ.ಪಿ. ರವರಿಗೆ ಅವುಗಳನ್ನು ತೆರೆಯಲು ಅನುಮತಿಸಲಾಯಿತು.)**

ನಿಪಿ-14 ಪಂಚನಾಮೆಯ ಕಾಲಕ್ಕೆ 1 ನೇ ಆರೋಪಿ ತೋರಿಸಿದ ಸೀರೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಮುದ್ದೆ ಮಾಲು-4 ಎಂದು, ಸಾಕ್ಷಿಯ ಸಹಿಯನ್ನು ಮುದ್ದೆ ಮಾಲು-4(ಎ) ಎಂದು, ಬಳೆ ಚೂರುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಮುದ್ದೆ ಮಾಲು-5 ಎಂದು, ಸಾಕ್ಷಿಯ ಸಹಿಯನ್ನು ಮುದ್ದೆ ಮಾಲು-5(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸರಕಾರಿ ಅಭಿಯೋಜಕರಿಂದಃ**

3. ದಿಃ 27-08-2022 ರಂದು ನಾನು ಪೊಲೀಸ್ ಠಾಣೆಗೆ ಹೋದಾಗ, ಅಲ್ಲಿ ಪೊಲೀಸರು 1 ಆರೋಪಿಯನ್ನು ತೋರಿಸಿದ್ದು, ಆತ ನನ್ನ ಸಮಕ್ಷಮ ತಾನು ಸುಶೀಲಾನ್ನು ಕೊಲೆ ಮಾಡಿದ ಸ್ಥಳ ಹಾಗೂ ಕೊಲೆ ಮಾಡಲು ಉಪಯೋಗಿಸಿದ ಬಟ್ಟೆಯನ್ನು ತೋರಿಸುತ್ತೇನೆ ಎಂದು ಹೇಳಿದ ಎಂದರೆ ಸರಿ. ಆತ ಸ್ಥಳ ತೋರಿಸುತ್ತೇನೆ ಎಂದು ಹೇಳಿದ ಮೇರೆಗೆ, ಪೊಲೀಸರು ನನ್ನನ್ನು, ಚಾಸಾ-5 ರವರನ್ನು, 1 ಆರೋಪಿಯೊಂದಿಗೆ ನೇಚರ್ ನೆಸ್ಟ್ ರೆಸಾರ್ಟ್ ಹತ್ತಿರ ಕರೆದುಕೊಂಡು ಹೋಗಿದ್ದು, ಅಲ್ಲಿ 1 ನೇ ಆರೋಪಿ ತಾನು ಅಡುಗೆ ಕೆಲಸ ಮಾಡುತ್ತಿದ್ದ ಕೋಣೆಯನ್ನು ತೋರಿಸಿರುತ್ತಾನೆ ಎಂದರೆ ಸರಿ. ಆ ನಂತರ ಅಡುಗೆ ಕೋಣೆಯ ಬಲಬದಿಗೆ ಇದ್ದ ಕೋಣೆಯಗೆ ಕರೆದುಕೊಂಡು ಹೋಗಿ, ಇದೇ ಕೋಣೆಯಲ್ಲಿ ಸುಶೀಲಾಳು ವಾಸವಾಗಿದ್ದು, ನಾನು ಆಕೆಯನ್ನು ಇದೇ ಜಾಗದಲ್ಲಿ ಕೊಲೆ ಮಾಡಿರುತ್ತೇನೆ ಎಂದು ತೋರಿಸಿರುತ್ತಾನೆ ಎಂದರೆ ಸರಿ. ಸದರಿ ಕೋಣೆಯು ತಗಡಿನ ಮೇಲ್ಛಾವಣಿ ಆಗಿರುತ್ತದೆ ಎಂದರೆ ಸರಿ. ಅಲ್ಲಿ 1 ನೇ ಆರೋಪಿ "ದಿಃ 26-08-2022 ರಂದು ನಸುಕಿನ ಬೆಳಿಗ್ಗೆ 01-45 ಗಂಟೆಯಿಂದ 02-00 ಗಂಟೆ ನಡುವಿನ ಅವಧಿಯಲ್ಲಿ ನನಗೆ ಸುಶೀಲಾಳ ಜೊತೆಯಲ್ಲಿ ದೈಹಿಕ ಸುಖ ಅನುಭವಿಸುವ ಆಸೆಯಾಗಿದ್ದು, ನಾನು ಅದನ್ನು ಸುಶೀಲಾಳಿಗೆ ಹೇಳಿದ್ದು, ಆಗ ಸುಶೀಲಾಳು ನನ್ನ ಜೊತೆ ಸಂಭೋಗ ಮಾಡಲು ಸಾಧ್ಯವಿಲ್ಲ ಅಂತಾ ಹೇಳಿ, ಈ ವಿಚಾರವನ್ನು ನಾನು ನಾಳೆ ರೆಸಾರ್ಟ್ ಮಾಲೀಕರಿಗೆ ಹೇಳಿ, ನಿನ್ನನ್ನು ಕೆಲಸದಿಂದ ತೆಗೆಸುತ್ತೇನೆ ಎಂದು ಹೇಳಿದಳು" ಎಂದು ಹೇಳಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಆ ನಂತರ 1 ನೇ ಆರೋಪಿ "ಸುಶೀಲಾಳು ನನ್ನ ಜೊತೆ ದೈಹಿಕ ಸಂಪರ್ಕ ಮಾಡಿ, ನನ್ನ ಆಸೆ ಈಡೇರಿಸಿಕೊಳ್ಳಲು, ಅವಕಾಶ ನೀಡಲಿಲ್ಲ ಎಂಬ ಕೋಪದಿಂದ ಮತ್ತು ಈ ವಿಚಾರವನ್ನು ರೆಸಾರ್ಟ್ ಮಾಲೀಕರಿಗೆ ಹೇಳಿ, ನನ್ನ ಕೆಲಸದಿಂದ ತೆಗೆಸುತ್ತಾಳೆ, ಇದರಿಂದ ನನ್ನ ಮರ್ಯಾದೆ ಹೋಗುತ್ತದೆ ಅಂತಾ ತಿಳಿದು, ಅವಳಿಗೆ ಒಂದು ಗತಿ ಕಾಣಿಸಬೇಕು ಅಂತಾ ನಿರ್ಧರಿಸಿ, ಸೀರೆಯಿಂದ ಅವಳ ಕುತ್ತಿಗೆಗೆ ಬಿಗಿದು, ಸಾಯಿಸಿರುತ್ತೇನೆ " ಎಂದು ಹೇಳಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ.

4. ಸುಶೀಲಾಳು ವಾಸವಾಗಿದ್ದ ಕೋಣೆಯಲ್ಲಿ ಕಬ್ಬಿಣದ rack, ಪ್ಲಾಸ್ಟಿಕ್ ಚೇರ್, ಒಂದು ಸಣ್ಣ ಫೈಬರ್ ಟೀಪಾಯಿ ಇತ್ತು ಎಂದರೆ ಸರಿ. ಅಲ್ಲಿ 1 ನೇ ಆರೋಪಿ ಒಂದು ಸೀರೆಯನ್ನು ಹಾಜರುಪಡಿಸಿ, ತಾನು ಇದೇ ಸೀರೆಯಿಂದ ಸುಶೀಲಾಳ ಕುತ್ತಿಗೆ ಬಿಗಿದು ಸಾಯಿಸಿರುತ್ತೇನೆ ಎಂದು ಹೇಳಿರುತ್ತಾನೆ ಎಂದರೆ ಸರಿ. ಸುಶೀಲಾಳ ಕುತ್ತಿಗೆ ಬಿಗಿದ ಸಮಯದಲ್ಲಿ ಆಕೆ ಒದ್ದಾಡಿದ್ದರಿಂದ ಆಕೆಯ ಬಳೆಯ ಚೂರುಗಳು ಸ್ಥಳದಲ್ಲಿ ಬಿದ್ದಿದ್ದು, ಅವುಗಳನ್ನು ಪೋಲಿಸರು

ಜಪ್ತುಪಡಿಸಿಕೊಂಡರು ಎಂದರೆ ಸರಿ. ಸ್ಥಳದಲ್ಲಿ ಸುಶೀಲಾಳ ಒಂದು ರೊಲ್ಡ್-ಗೊಲ್ಡ್ ಕಿವಿ ಓಲೆ ಸಹ ಬಿದ್ದಿತ್ತು, ಅದನ್ನು ಪೋಲಿಸರು ಜಪ್ತುಪಡಿಸಿಕೊಂಡರು ಎಂದರೆ ಸರಿ. ಸುಶೀಲಾಳ ಒಂದು ರೊಲ್ಡ್-ಗೊಲ್ಡ್ ಕಿವಿ ಓಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಮುದ್ದೆ ಮಾಲು-6 ಎಂದು, ಸಾಕ್ಷಿಯ ಸಹಿಯನ್ನು ಮುದ್ದೆ ಮಾಲು-6(ಎ) ಎಂದು ಗುರುತಿಸಲಾಯಿತು. ಸದರಿ ರೊಲ್ಡ್-ಗೊಲ್ಡ್ ಕಿವಿ ಓಲೆಯು ತುಂಡಾಗಿರುತ್ತದೆ. ಸುಶೀಲಾಳ ಕುತ್ತಿಗೆಗೆ ಬಟ್ಟೆ ಬಿಗಿದ ಸಮಯದಲ್ಲಿ ಆಕೆ ಒದ್ದಾಡಿದ್ದರಿಂದ ಆಕೆಯ ಕಾಲುಗಳು ಗೋಡೆಯ ಮೊಳೆಗೆ ತಾಗಿ ರಕ್ತ ಬಂದಿದ್ದರಿಂದ, ಸದರಿ ಮೊಳೆಯನ್ನು ಪೋಲಿಸರು ಜಪ್ತುಪಡಿಸಿಕೊಂಡರು ಎಂದರೆ ಸರಿ. ಸದರಿ ಮೊಳೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಮುದ್ದೆ ಮಾಲು-7 ಎಂದು, ಸಾಕ್ಷಿಯ ಸಹಿಯನ್ನು ಮುದ್ದೆ ಮಾಲು-7(ಎ) ಎಂದು ಗುರುತಿಸಲಾಯಿತು. ಸದರಿ ಸ್ಥಳದಲ್ಲಿ ಪೊಲೀಸರು ನಿಪಿ-14 ರಂತೆ ಪಂಚನಾಮೆಯನ್ನು ಮಾಡಿ, ನಿಪಿ-16 ರಿಂದ ನಿಪಿ-18 ರಂತೆ ಫೋಟೋಗಳನ್ನು ತೆಗೆದಿರುತ್ತಾರೆ ಹಾಗೂ ವಿಡಿಯೋವನ್ನು ಸಹ ಮಾಡಿರುತ್ತಾರೆ ಎಂದರೆ ಸರಿ. ನಿಪಿ-14 ಪಂಚನಾಮೆಯನ್ನು ಮದ್ಯಾಹ್ನ 12-15 ಗಂಟೆಯಿಂದ 02-30 ರ ವರೆಗೆ ಮಾಡಿರುತ್ತಾರೆ ಎಂದರೆ ಸರಿ. 1 ಆರೋಪಿ ತಾನು ಸುಶೀಲಾಳನ್ನು ಯಾವ ಕಾರಣಕ್ಕಾಗಿ ಕೊಲೆ ಮಾಡಿರುತ್ತಾನೆ ಎಂದು ನಮ್ಮ ಮುಂದೆ ಹೇಳಿದ್ದರೂ ಸಹ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ನ್ಯಾಯಾಲಯದ ಸಮಯದ ಅಭಾವದಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.
ಸಹಿ ಇದೆ/-
(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ